**ದಿಃ09.09.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋದಿಸಲಾಯಿತು.**
**ಮುಂದುವರೆದ ಪಾಟೀಸವಾಲುಃ ಪ್ರತಿವಾದಿ ಪರ ಶ್ರೀ.ವೈ.ಎನ್.ಎ. ವಕೀಲರಿಂದಃ**

ತಾಃ06.02.1937 ರ ಖರಿದಿ ಪತ್ರದಲ್ಲಿ ಆಸ್ತಿಯನ್ನು 2 ಅಂಕಣದ ಮನೆ ಎಂದು ಹೇಳಲಾಗಿದೆ ಎಂದರೆ ನಿಜ. ಅದಕ್ಕೆ ಸೇರಿದ ಹಿತ್ತಲೂ ಮತ್ತು ಅಂಗಳ ಎಂದು ಸಹ ಹೇಳಿದೆ. ನನ್ನ ಆಸ್ತಿಯ ಪಶ್ಚಿಮ ದಿಕ್ಕಿನಲ್ಲಿ ಅಗಸರ ರಾಮಯ್ಯನವರ ಮಗ ನಾರಾಯಣಪ್ಪ ಇವರ ಆಸ್ತಿ ಇದೆ ಎಂದರೆ ನಿಜ. ಸದರಿ ನಾರಾಯಣಪ್ಪ ಈಗ ಇಲ್ಲ ಎಂದರೆ ನಿಜ. ನಾರಾಯಣಪ್ಪನ ನಂತರ ಆ ಆಸ್ತಿಯ ಖಾತೆ ದಾಖಲೆಗಳು ಅವರ ಹೆಂಡತಿ ಸರಸ್ವತಿ ಇವರ

This is a True Copy of the Court Records Online. Authenticated @ districts.ecourtsindia.com/cnr/KABC0A0039082013/truecopy/order-6.pdf

www.ecourtsindia.com

ಹೆಸರಿಗೆ ಬದಲಾಗಿರುವುದು ನನಗೆ ಮಾಹಿತಿ ಇಲ್ಲ. ಸದರಿ ಸರಸ್ವತಿ ಇವರ ತಮ್ಮ ಜಾಗೆಯಲ್ಲಿ 26 * 40 ರ ಶೀಟ್ ಮನೆ ಯೊಂದನ್ನು ಕಟ್ಟಿ ಬಾಡಿಗೆಗೆ ಕೊಟ್ಟಿದ್ದಾರೆ ಎಂದರೆ ಇರಬಹುದು. ಆ ಮನೆಯ ಮುಂದೆ 19 * 26 ರ ಅಳತೆಯ ಖಾಲಿ ಜಾಗೆ ಇದೆ ಎಂದರೆ ಸರಿಯಲ್ಲ. ನನ್ನ ಮನೆಯ ಪಶ್ಚಿಮ ದಿಕ್ಕಿನಲ್ಲಿ ರಾಜಣ್ಣ ಇಲ್ಲ ಎಂದರೆ ಅಲ್ಲಿ ಅವರ ಆಸ್ತಿ ಇದೆ. ಅದಕ್ಕಾಗಿ ನಾನು ದಾಖಲೆಗಳನ್ನು ಕೊಟ್ಟಿಲ್ಲ. ನನ್ನ ಮನೆ ಅಕ್ಕಪಕ್ಕದಲ್ಲಿ ಪ್ರತಿವಾದಿಯ ಆಸ್ತಿ ಇಲ್ಲದೆ ಇರುವುದರಿಂದ ಆತ ನನ್ನ ಆಸ್ತಿಯ ಅತಿಕ್ರಮಿಸುವ ಪ್ರಮೇಯ ವಿಲ್ಲ ಎಂದರೆ ಸರಿಯಲ್ಲ. ನಾನು ಈ ದಾವೆಯಲ್ಲಿ ಸರಸ್ವತಮ್ಮನನ್ನು ಪ್ರತಿವಾದಿ ಮಾಡಬೇಕಾಗಿದ್ದರೂ ಅವರನ್ನು ಬಿಟ್ಟು ಪ್ರತಿವಾದಿ ತೊಂದರೆ ಕೊಡಲು ಮಾಡಿದ ದಾವೆಗಾಗಿ ಈ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯ ಮೇಲೆ ಯಾವುದೇ ದಾವಾ ಕಾರಣಗಳು ಇರದೆ ಅವರಿಗೆ ತೊಂದರೆ ಕೊಡಬೇಕೆಂದು ಮಾಡಿದ ದಾವೆಗಾಗಿ ಈ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಪ್ರತಿವಾದಿಯರು ಮೊದಲು ತಂಟೆಗೆ ಬಂದಿದ್ದರು. ಅದಕ್ಕಾಗಿ ದೂರು ಕೊಡಲು ಹೋಗಿದ್ದೇ ನಂತರ ಈ ದಾವೆ ಮಾಡಿದ್ದೇನೆ.

**ಮರುವಿಚಾರಣೆಃ - ಇಲ್ಲ.**

(ತೆರೆದ ನ್ಯಾಯಲಯದಲ್ಲಿ ಬೆರಳಚ್ಚುಗಾರರು ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಸಾಕ್ಷ್ಯವನ್ನು ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ. ಕೇ. ಸ. ಇದೆ.**

**73 ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು**
**ಬೆಂಗಳೂರು.**

www.ecourtsindia.com

This is a True Copy of the Court Records Online. Authenticated @ districts.ecourtsindia.com/cnr/KABC0A0039082013/truecopy/order-6.pdf